

ಎಂ.ಎಸ್. ಆಶಾದೇವಿ

ಕಲೆ: ಬಸವರಾಜಾಚಾರ್ ಕೆ.ಆರ್.

# ಸಾವಿರ ಮುಳ್ಳಿರಲಿ, ಒಂದಾರೆ ಅರಳಿದ ಹೂವಿರಲಿ

## ಹೆಣ್ಣಿನ ಆತ್ಮಕಥನಗಳ ಕುರಿತ ಅಪೂರ್ಣ ಬರಹ

ಈ ತನಕ ಆತ್ಮಕಥನಗಳನ್ನು ಸಾಹಿತ್ಯದ ವಿಶಿಷ್ಟ ಪ್ರಕಾರವಾಗಿ ನೋಡಲಾಗುತ್ತಿತ್ತು. ಅವುಗಳನ್ನು 'ಕಥನ ಕುತೂಹಲ'ಕ್ಕಾಗಿ ನೋಡುವ ಪರಿಪಾಠವೇ ನಮ್ಮಲ್ಲಿ ಹೆಚ್ಚು. ಮಹಿಳೆಯರ ಆತ್ಮಕಥೆಗಳನ್ನಂತೂ ಅವರ ಬದುಕಿನ ವೈಯಕ್ತಿಕ ವಿವರಗಳಿಗಾಗಿ ನೋಡುವುದೇ ಹೆಚ್ಚು.ಸಮಕಾಲೀನ ಸಂದರ್ಭವು 'ಮರು ಇತಿಹಾಸ'ದ ಕಾಲವಾಗಿರುವ ಸಂದರ್ಭದಲ್ಲಿ, ಚರಿತ್ರೆಯನ್ನು ಅನೇಕ ಆಯಾಮಗಳಲ್ಲಿ ಮರು ನಿರೂಪಿಸುವ ಪ್ರಯತ್ನಗಳಲ್ಲಿ ಮಹಿಳಾ ಆತ್ಮಕಥನಗಳೂ ಸೇರಿವೆ. ಮಹಿಳೆಯರ ಆತ್ಮಕಥೆಗಳ ಕುರಿತು ಸೂಕ್ಷ್ಮನೋಟವನ್ನು ಕೊಡುವ ಬರಹ ಇಲ್ಲಿದೆ.

